ಸೃಜನಿ

**SRUJANI: Indian Journal of Innovative Research and Development (SIJIRD)**
Volume-4 Issue 6, January-February 2026, Pp. 159-168
Bi-Monthly, Peer-Reviewed, Open Access, Indexed Journal

**I S S N: 2583-3510**
SIRDF JOURNALS
editor@srujani.in
www.srujani.in

# ದಲಿತ ಮಹಿಳೆ ಮತ್ತು ರಾಜಕೀಯ ಸಹಭಾಗಿತ್ವ

**ಡಾ. ಪಾರ್ವತಮ್ಮ ವಿ**
ಉಪನ್ಯಾಸಕರು, ರಾಜ್ಯಶಾಸ್ತ್ರ ವಿಭಾಗ, ಎಸ್.ಎಸ್.ಎ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು(ಸ್ವಾಯತ್ತ.,) ಬಳ್ಳಾರಿ

***Abstract:***
*ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವವಾದಿ ರಾಷ್ಟ್ರ ಎಂಬ ಖ್ಯಾತಿಗೆ ಒಳಗಾಗಿರುವ ಭಾರತವು ತನ್ನ ಸಂವಿಧಾನದ ಆಶಯಗಳಲ್ಲಿ ಸಮಾಜವಾದಿ ರಾಷ್ಟ್ರದ ಕನಸನ್ನು ಸಾಕಾರಗೊಳಿಸಿಕೊಳ್ಳಲು ಹಲವಾರು ಬಗೆಯ ಉದ್ದೇಶಗಳನ್ನೊಳಗೊಂಡಿದೆ. ಇದರ ಮೂಲಕ ಪ್ರತಿಯೊಬ್ಬ ಪ್ರಜೆಯ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸುವುದು. ಹಾಗೆಯೇ ಸಮಾಜದ ವಿವಿಧ ವರ್ಗಗಳ ನಡುವಿನ ಕಂದಕಗಳನ್ನು ಮುಚ್ಚಿಸಲು, ಸಮಾನತೆಯ ತತ್ವ ಸಾಕಾರವಾಗಲು ಸಂವಿಧಾನಬದ್ಧವಾಗಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮನ್ನಣೆ ನೀಡಲಾಗಿದೆ. ಭಾರತ ಅಳವಡಿಸಿಕೊಂಡಿರುವ ಪ್ರಜಾಪ್ರಭುತ್ವವಾದಿ ಪದ್ಧತಿಯ ಸರಕಾರದಲ್ಲಿ ತುಂಬ ಉಪಯುಕ್ತಕರವಾದ ಪಾತ್ರವನ್ನು ಪಂಚಾಯಿತಿಗಳು ಅಥವಾ ಸ್ಥಳೀಯ ಸಂಸ್ಥೆಗಳು ನಿರ್ವಹಿಸುತ್ತಿವೆ. ಇಲ್ಲಿ ಪ್ರಜೆಗಳ ಗರಿಷ್ಠ ಮಟ್ಟದ ಸಹಭಾಗಿತ್ವವಿಲ್ಲದೆ ಪ್ರಜಾಪ್ರಭುತ್ವ ಯಶಸ್ವಿಯಾಗಲಾರದು. ಆದ್ದರಿಂದ ಸಮಾಜದ ಅಂಚಿನಲ್ಲಿರುವಂತಹ ಪ್ರತಿಯೊಬ್ಬರು ಸಹ ಅಭಿವೃದ್ಧಿಯ ಹರಿಕಾರರಾಗಲು ಅವರನ್ನು ರಾಜಕೀಯವಾಗಿ ತರಬೇತಿಗೊಳಿಸಿ ದೇಶದ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ಪಂಚಾಯತ್ ರಾಜ್ ಸಂಸ್ಥೆಗಳ ಉಗಮವಾಗಿರುವುದು. ಸಮಾಜದಲ್ಲಿ ವಾಸಿಸುವ ಪ್ರತಿಯೊಬ್ಬ ಪ್ರಜೆಯೂ ತಮ್ಮ ಬೇಕು ಬೇಡಗಳ ಬಗ್ಗೆ ಆಸಕ್ತರಾಗಿದ್ದರೆ ಅವರು ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಕಡ್ಡಾಯವಾಗಿ ಭಾಗವಹಿಸುತ್ತಾರೆ.*

**Keywords:** *ಸ್ಥಳೀಯ ಸರ್ಕಾರ, ದಲಿತ ಮಹಿಳೆ, ರಾಜಕೀಯ ಸಹಭಾಗಿತ್ವ, ಪಂಚಾಯತ್ ರಾಜ್.*

## ಪೀಠಿಕೆ

ದಲಿತ ಮಹಿಳಾ ರಾಜಕೀಯ ಸಹಭಾಗಿತ್ವ ಹಾಗೂ ಸಬಲೀಕರಣದ ನೆಲೆಗಟ್ಟಿನಲ್ಲಿ ಸಮಸ್ತ ದಲಿತ ಮಹಿಳಾ ಸಮುದಾಯದ ಚಟುವಟಿಕೆಯನ್ನು ಅರಿಯುವುದಾಗಿದೆ. ಶೋಷಣೆ, ತಿರಸ್ಕಾರ ಊರಿನ ಹಿರಿಯರಿಗೆ ಮೈ ಒಪ್ಪಿಸುವ, ಆತ್ಮಸಾಕ್ಷಿಯನ್ನೇ ಅಡವಿಟ್ಟ ದಲಿತ ಮಹಿಳೆಯು ಸಾಮಾಜಿಕ ಜೀವನದಲ್ಲಿ ಅನುಭವಿಸುತ್ತಿರುವ ಸಂಕಟ ಹಾಗೂ ತಲ್ಲಣಗಳೊಂದಿಗೆ ಅವಳ ರಾಜಕೀಯ ಸಹಭಾಗಿತ್ವವನ್ನು ಅರಿಯುವುದು ಇಂದಿನ ತುರ್ತಾಗಿದೆ. ವೈಚಾರಿಕತೆಯ ನಡಿಗೆಯಲ್ಲಿ ದಲಿತ ಮಹಿಳೆಯನ್ನು ಮೂರನೆಯ ದರ್ಜೆಯ ಪ್ರಜೆಯಾಗಿ ತೂಗುವ ಮುಂದುವರಿದ ಮಹಿಳೆಯರು ತಮ್ಮಲ್ಲಿಯೇ ಅರಿಯುವುದು ಒಳಿತು. ಅತ್ಯಂತ ಕ್ಲಿಷ್ಟಕರವಾಗಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ದಲಿತ ಸ್ತ್ರೀ ಪ್ರತಿಯೊಂದು ಹಂತದಲ್ಲಿಯೂ ಹಿಂದೆಯೇ ಉಳಿಯುತ್ತಿರುವುದರಿಂದ ಅಭಿವೃದ್ಧಿ ಎಂಬ ನಿರ್ವಚನಕ್ಕೆ ಹಿನ್ನಡೆಯುಂಟಾಗಿದೆ· ವರ್ತಮಾನದಲ್ಲಿ ಭಾರತವು ಒಂದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರ

***Please cite this article as:*** ಪಾರ್ವತಮ್ಮ, ವಿ. (2026). ದಲಿತ ಮಹಿಳೆ ಮತ್ತು ರಾಜಕೀಯ ಸಹಭಾಗಿತ್ವ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(6), 159–168

ಎಂಬ ವಿಶ್ವಮಾನ್ಯತೆಗೆ ಒಳಗಾಗಿದೆ. ಇದು ವಿಶ್ವ ಸಮುದಾಯಲ್ಲಿ ಪಾಲುದಾರರಾಗಲು ಸ್ವಲ್ಪ ಕಾಲಾವಕಾಶ ಹಿಡಿಯಬಹುದು ಅಭಿವೃದ್ಧಿ ಇಲ್ಲದೆ ವಿಶ್ವದ ಬಲಿಷ್ಠ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಲು ಭಾರತಕ್ಕೆ ಸಾಧ್ಯವಾಗಲಾರದು. ಪ್ರಗತಿ ಮತ್ತು ಅಭಿವೃದ್ಧಿಯನ್ನು ಸಮಾಜದ ಪ್ರತಿಯೊಬ್ಬ ಪ್ರಜೆಗಳ ಮತ್ತು ಸಂಸ್ಥೆಗಳ ಸಹಕಾರದಿಂದ ಮಾತ್ರವೇ ಸಾಧಿಸಲು ಸಾಧ್ಯ. ಇದರ ಸಾಫಲ್ಯತೆಯನ್ನು ನಾವು ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಸಾಕಾರಗೊಳಿಸಿಕೊಳ್ಳಬಹುದು. ಇವುಗಳ ಮೂಲಕ ಪ್ರತಿಯೊಬ್ಬ ಸ್ತ್ರೀ ಪುರುಷರನ್ನು ಆಡಳಿತದಲ್ಲಿ ಸಮಭಾಗಿಗಳನ್ನಾಗಿ ಅಭಿವೃದ್ಧಿ ಯೋಜನೆಗಳಲ್ಲಿ ಭಾಗವಹಿಸುವಂತೆ ಮಾಡಲು ಇವುಗಳ ಅವಶ್ಯಕತೆ ಇದೆ. ವಿವಿಧ ವಿದ್ವಾಂಸರು, ಅರ್ಥಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು, ರಾಜ್ಯಶಾಸ್ತ್ರಜ್ಞರು ಭಾರತವು ಯೋಜನೆಗಳನ್ನು ಸಾಕಾರ, ಸಫಲಗೊಳಿಸಬೇಕಾದೆ, ಆಡಳಿತದಲ್ಲಿ ಪ್ರತಿಯೊಬ್ಬರು ಸಕ್ರಿಯವಾಗಿ ಪಾಲ್ಗೊಳ್ಳಬೇಕಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇಂದಿಗೆ ಆಧುನಿಕ ಯುಗದಲ್ಲಿಯೂ ಭಾರತದ ಸಾಂಪ್ರದಾಯಿಕ ಜೀವನದಲ್ಲಿ ಕಂದಾಚಾರಗಳು, ಜಾತಿಪದ್ಧತಿ, ಅಸ್ಪೃಶ್ಯತೆ, ಬಡತನ, ನಿರುದ್ಯೋಗಗಳಂತಹ ಜ್ವಲಂತ ಸಮಸ್ಯೆಗಳು ದೇಶದ ಅಭಿವೃದ್ಧಿಗೆ ಕಂಠಕಪ್ರಾಯವಾಗಿ ಪರಿಣಮಿಸಿವೆ. ಇಂತಹ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಲೆಂದೇ ಪಂಚಾಯತ್ ರಾಜ್ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ.

**ದಲಿತರ ರಾಜಕೀಯ ಸಹಭಾಗಿತ್ವ ಪರಿಕಲ್ಪನೆ**

ದಲಿತರು ಸಾಮಾಜಿಕವಾಗಿ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ನಿರ್ಲಕ್ಷಿತ ಸಮುದಾಯವಾಗಿದೆ. ಹಾಗಾಗಿ ಅವರು ಜಾತಿ ಪ್ರಾಬಲ್ಯದ ಸಮಾಜದಿಂದ ತಾರತಮ್ಯ, ಅಸಮಾನತೆ ಮತ್ತು ಕಷ್ಟಗಳನ್ನು ಎದುರಿಸುತ್ತಿದ್ದಾರೆ. ಜಾತಿಪದ್ಧತಿಯ ಸಿದ್ಧಾಂತ ವರ್ಣವ್ಯವಸ್ಥೆಯೊಂದಿಗೆ ಅಂತರ್ಗತಗೊಂಡಿದ್ದು, ಇದು ಹಿಂದೂ ಸಮಾಜವನ್ನೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎನ್ನುವ ನಾಲ್ಕು ಹಂತಗಳಲ್ಲಿ ವರ್ಗೀಕರಿಸಿದೆ. ಮೊದಲ ಮೂರು ವರ್ಣಗಳನ್ನು ದ್ವಿಜರೆಂದು ಪರಿಗಣಿಸಲಾಗುತ್ತದೆ. ಈ ವರ್ಣದ ಜನರು ವೇದಗಳಲ್ಲಿ ಪ್ರಸ್ತಾಪಿಸಿರುವ ಪ್ರಕಾರ ಉಪನಯನದಲ್ಲಿ ಪವಿತ್ರ ದಾರವನ್ನು ಧರಿಸುತ್ತಾರೆ. ಆದರೆ ಇಂತಹ ಆಚರಣೆಯನ್ನು ನಿರ್ವಹಿಸಲು ದಲಿತರಿಗೆ ಅವಕಾಶವಿಲ್ಲ. ಭೂಮಿಯನ್ನು ಊಳುವುದು, ಚಪ್ಪಲಿ ತಯಾರಿಕೆ, ಬಟ್ಟೆ ತೊಳೆಯುವುದು ಮುಂತಾದ ದೈಹಿಕ ಶ್ರಮದ ಕೆಲಸಗಳನ್ನು ಶೂದ್ರ ಸಮುದಾಯದವರು ನಿರ್ವಹಿಸುತ್ತಿದ್ದರು. ಆದರೂ ಈ ಸಮುದಾಯ ಅಸ್ಪೃಶ್ಯತೆಯ ಆಚರಣೆಗೆ ಒಳಗಾಗಿತ್ತು. ಉನ್ನತ ಜಾತಿಯ ಜನರೊಂದಿಗೆ ಸಮಾನವಾಗಿ ಕುಳಿತುಕೊಳ್ಳುವ ಅವಕಾಶವನ್ನು ನಿರಾಕರಿಸಲಾಗಿತ್ತು. ಇತರರಿಗಾಗಿ ನಿರ್ಮಿಸಲಾದ ಪ್ರತ್ಯೇಕ ಬಾವಿಗಳನ್ನು ದಲಿತರು ಉಪಯೋಗಿಸಬೇಕಾಗಿತ್ತು. ದಲಿತ ಅಲಕ್ಷಿತ ಸ್ಥಿತಿಗಳ ನಿವಾರಣೆಗಾಗಿ ರಾಜಕೀಯ ದಾರ್ಶನಿಕರಾದ ಜ್ಯೋತಿಬಾ ಫುಲೆ, ಮಹಾತ್ಮ ಗಾಂಧಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರು ಶ್ರಮಿಸಿದ್ದಾರೆ. ದಲಿತರ ಸ್ಥಿತಿಗಳ ಸುಧಾರಣೆಗಾಗಿ ವಿವಿಧ ಕ್ರಮಗಳನ್ನು ಕೈಗೊಂಡಿದ್ದಾರೆ. ಅಸ್ಪೃಶ್ಯತೆ ನಿವಾರಣೆ, ತಾರತಮ್ಯ ನಿವಾರಣೆಗಳನ್ನು ಒಳಗೊಂಡಂತೆ ದಲಿತರ ಸಾಮಾಜಿಕ ಸ್ಥಿತಿಗಳ ಸುಧಾರಣೆಗಾಗಿ ಸ್ವಾತಂತ್ರ್ಯದ ನಂತರ ವಿವಿಧ ಸಾಮಾಜಿಕ ಶಾಸನಗಳನ್ನು ರೂಪಿಸಲಾಗಿದೆ. ಇದರೊಂದಿಗೆ ಇತರ ಸಮುದಾಯಗಳೊಂದಿಗೆ ಸಮಾನವಾಗಿ ಜೀವಿಸುವ ಅವಕಾಶಗಳನ್ನು ಶಾಸನಗಳ ಮೂಲಕ ರೂಪಿಸಲಾಗಿದೆ. ಸಮಾನ ಮತದಾನದ ಹಕ್ಕು, ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ನೀಡಲಾಗಿದೆ. ಈ ಅವಕಾಶಗಳನ್ನು ಸಂವಿಧಾನದಲ್ಲಿ ಅಳವಡಿಸಲಾಗಿದ್ದು, ಭಾರತದ ಸಂವಿಧಾನವನ್ನು ಅಂಗೀಕರಿಸಿದ ದಿನದಿಂದಲೂ ಜಾರಿಯಲ್ಲಿವೆ. ವಿವಿಧ ಅಸಮಾನತೆ ಆಚರಣೆಗಳನ್ನು ನಿವಾರಿಸುವ ಪ್ರಯತ್ನಗಳು ಇಂದಿಗೂ ಜಾರಿಯಲ್ಲಿವೆ. ರಾಜಕೀಯ

ಚಟುವಟಿಕೆಗಳ ಬಗ್ಗೆ ಪ್ರಜ್ಞೆ ಮತ್ತು ಅರಿವು ಹಾಗೂ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ ದಲಿತರ ಸಮಾಜೋ–ಆರ್ಥಿಕ ಸ್ಥಿತಿಗಳ ಪ್ರಮುಖ ಆಯಾಮಗಳಲ್ಲಿ ಒಂದಾಗಿದೆ. ರಾಜಕೀಯ ಚಟುವಟಿಕೆಗಳ ಬಗ್ಗೆ ದಲಿತರಿಗೆ ಇರುವ ಪ್ರಜ್ಞೆ ಅವರನ್ನು ತಮ್ಮ ಹಕ್ಕುಗಳು ಮತ್ತು ವಿಶೇಷ ಅವಕಾಶಗಳು ಮತ್ತು ಸೌಕರ್ಯಗಳಿಗೆ ಸಂಬಂಧಿಸಿದ ನಿರ್ಣಯ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸುತ್ತದೆ. ಆದ್ದರಿಂದ ದಲಿತರ ರಾಜಕೀಯ ಪ್ರಜ್ಞೆ ಮತ್ತು ರಾಜಕೀಯ ಸಹಭಾಗಿತ್ವ ಕುರಿತಾದ ಅಧ್ಯಯನ ಮಹತ್ವ ಪಡೆದುಕೊಂಡಿದೆ ಮತ್ತು ಅದು ಇಂದಿನ ಅಗತ್ಯವಾಗಿದೆ.

ಅರಿಸ್ಟಾಟಲ್ ಪ್ರತಿಪಾದಿಸುವ ಪ್ರಕಾರ ಸ್ವಾಭಾವಿಕವಾಗಿ ಮಾನವನು ರಾಜಕೀಯ ಜೀವಿಯಾಗಿದ್ದಾನೆ. ಮಾನವನು ತನ್ನ ರಾಜಕೀಯ ಚಟುವಟಿಕೆಯ ಮೂಲಕ ಸ್ಪಷ್ಟವಾಗಿ ಮತ್ತು ವಿಶ್ವಾಸಾರ್ಹತೆಯಿಂದ ತನ್ನ ಗುಂಪಿನೊಂದಿಗೆ ಗುರುತಿಸಿಕೊಳ್ಳುತ್ತಾನೆ. ಆದರೆ ಇಂದು ರಾಜ್ಯದ ವ್ಯವಸ್ಥೆಯು ನಗರ ರಾಜ್ಯದ ಪರಿಕಲ್ಪನೆಯಿಂದ ಆಧುನಿಕ ಪ್ರಜಾಸತ್ತಾತ್ಮಕ ರಾಜ್ಯದ ವ್ಯವಸ್ಥೆಗೆ ರೂಪಾಂತರಗೊಂಡಿದೆ. ಈ ಹಿನ್ನೆಲೆಯಲ್ಲಿ ಅರಿಸ್ಟಾಟಲ್ ಕಾಲಘಟ್ಟಕ್ಕೆ ಹೋಲಿಸಿದರೆ ಮಾನವನ ರಾಜಕೀಯ ಸಹಭಾಗಿತ್ವವು ಇಂದು ಗುಣಾತ್ಮಕ ಬದಲಾವಣೆಯನ್ನು ಕಂಡುಕೊಂಡಿದೆ. ಆಧುನಿಕ ರಾಜಕೀಯ ವ್ಯವಸ್ಥೆಯಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಪ್ರಜಾಸತ್ತಾತ್ಮಕ ಸಂಸ್ಥೆಗಳ ಸ್ಥಾಪನೆಗೆ ಪ್ರಜ್ಞಾಪೂರ್ವಕವಾದ ಮತ್ತು ದೃಢವಾದ ರಾಜಕೀಯ ಸಹಭಾಗಿತ್ವದ ಅಗತ್ಯವಾಗಿದೆ. ಇಂತಹ ಪ್ರಜಾಸತ್ತಾತ್ಮಕ ಸಂಸ್ಥೆಗಳು ಪ್ರತಿಯೊಬ್ಬ ನಾಗರಿಕನಿಗೂ ಉಪಯುಕ್ತವಾಗುತ್ತದೆ.

ರಾಜ್ಯದ ವಿವಿಧ ಚಟುವಟಿಕೆಗಳಲ್ಲಿ ಜನರ ಪಾಲ್ಗೊಳ್ಳುವಿಕೆಯ ಅಗತ್ಯ ಮತ್ತು ಮಹತ್ವ ಇಂದು ಜನರಿಗೆ ಮನವರಿಕೆಯಾಗುತ್ತಿದೆ. ಗುರಿಗಳ ನಿಗದೀಕರಣ ಮತ್ತು ನೀತಿಗಳ ಕಾರ್ಯಾಚರಣೆಯಲ್ಲಿ ಜನರ ಪಾಲ್ಗೊಳ್ಳುವಿಕೆ ಅಗತ್ಯವೆಂದು ಪರಿಗಣಿಸಲಾಗುತ್ತದೆ. ಇಂತಹ ಸಂಗತಿಗಳಲ್ಲಿ ಜನರ ಪಾಲ್ಗೊಳ್ಳುವಿಕೆಯ ಅಗತ್ಯ ಹೆಚ್ಚು ಮಹತ್ವ ಪಡೆದುಕೊಳ್ಳುತ್ತಿದೆ. ರಾಜಕೀಯ ಪಾಲ್ಗೊಳ್ಳುವಿಕೆಯು ಜನತೆ ತಮ್ಮ ಜೀವನವನ್ನು ರೂಪಿಸಿಕೊಳ್ಳುವ ಅವಕಾಶ ಇದು ರಾಜಕೀಯ ಮಹತ್ವದ ಪ್ರಶ್ನೆಯಾಗಿದೆ.

ಜಾರಿಯಲ್ಲಿರುವ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯ ಉಳಿವಿಗೆ ರಾಜಕೀಯ ಪಾಲ್ಗೊಳ್ಳುವಿಕೆಗೆ ಪ್ರಮುಖ ಪಾತ್ರ ವಹಿಸುತ್ತದೆ. ರಾಜಕೀಯ ಅರಿವಿನ ಕೊರತೆ ಮತ್ತು ಜನರ ನಿಷ್ಕ್ರಿಯತೆಯು ರಾಜಕೀಯ ಅರಿವಿನ ಕೊರತೆ ಮತ್ತು ಜನರ ನಿಷ್ಕ್ರಿಯತೆಯು ರಾಜಕೀಯ ವ್ಯವಸ್ಥೆಯನ್ನು ಬೇಜವಾಬ್ದಾರಿಯುತಗೊಳಿಸಿ ಅಂತಿಮವಾಗಿ ರಾಜಕೀಯ ವ್ಯವಸ್ಥೆಯ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುತ್ತದೆ. ರಾಜಕೀಯ ಪ್ರಜ್ಞೆ ಮತ್ತು ರಾಜಕೀಯ ಅರಿವು ಸಾಮಾನ್ಯ ಜನರಿಗೆ ತಮ್ಮ ಹಿತಾಸಕ್ತಿಗಳನ್ನು ಸ್ಪಷ್ಟಪಡಿಸಿಕೊಳ್ಳುವ ಪ್ರಜ್ಞೆಯನ್ನು ಮೂಡಿಸುತ್ತದೆ. ರಾಜಕೀಯ ಪ್ರಜ್ಞೆಯಿಂದ ಸ್ಪಷ್ಟಗೊಂಡ ಹಿತಾಸಕ್ತಿಗಳು ಅವುಗಳ ಕ್ರೋಡೀಕರಣಕ್ಕೆ ಅವಕಾಶ ನೀಡುತ್ತದೆ. ಹಿತಾಸಕ್ತಿಗಳ ಕ್ರೋಡೀಕರಣ ಜನಗಳ ಸಂಘಟನೆಗೆ ಸಹಕಾರಿಯಾಗುತ್ತದೆ. ಜನಶಕ್ತಿಯ ಸಂಘಟನೆಯು ರಾಜಕೀಯ ವ್ಯವಸ್ಥೆಯಲ್ಲಿ ಸಕ್ರಿಯ ಮತ್ತು ಪರಿಣಾಮಕಾರಿ ರಾಜಕೀಯ ಪಾಲ್ಗೊಳ್ಳುವಿಕೆಗೆ ದಾರಿ ಮಾಡಿಕೊಡುತ್ತದೆ. ಈ ಎಲ್ಲ ಚರ್ಚೆಗಳ ಹಿನ್ನೆಲೆಯಲ್ಲಿ ರಾಜಕೀಯ ಸಹಭಾಗಿತ್ವದ ಮಹತ್ವವು ಇಂದು ಪ್ರಾಧಾನ್ಯತೆಯನ್ನು ಪಡೆದುಕೊಂಡಿದೆ.

ಮಾನವನ ಅಸ್ತಿತ್ವಕ್ಕೆ ಅನಿವಾರ್ಯವಾದ ಅಂಶಗಳಲ್ಲಿ ರಾಜಕಾರಣವೂ ಒಂದು. ಆದ್ದರಿಂದ ರಾಜಕಾರಣದ ಅಧ್ಯಯನವಿಲ್ಲದೇ, ಜನತೆ ತಮ್ಮ ಹಕ್ಕು ಬಾಧ್ಯತೆಗಳ ಬಗ್ಗೆ ಜಾಗರೂಕರಾಗಲಾರರು. ದೇಶದ ರಾಜಕೀಯ ಪ್ರಕ್ರಿಯೆಗಳಲ್ಲಿ ಸಕ್ರಿಯವಾಗಿ, ಸೃಜನಾತ್ಮಕವಾಗಿ ಬಾಗವಹಿಸಲಾರರು. ರಾಜಕಾರಣ

ಜ್ಞಾನವಿಲ್ಲದೆ ದೇಶದ ಅಭಿವೃದ್ಧಿ ಅಸಾಧ್ಯ. "ಎಲ್ಲ ರಾಷ್ಟ್ರದ ಜನತೆ ರಾಜಕೀಯ ವಿಜ್ಞಾನ, ಮಾನದಂಡಗಳು, ಆಡಳಿತ ಹಾಗೂ ರಾಜನೀತಿತ್ವ ಜ್ಞಾನಗಳನ್ನು ಮಾನಸಿಕವಾಗಿ ಹೊಂದದಿದ್ದರೆ ಅವರು ಉನ್ನತ ವ್ಯಕ್ತಿಗಳೆನಿಸಿಕೊಳ್ಳಲಾರರು." ಆದ್ದರಿಂದಲೇ ಭಾರತದ ಇಂದಿನ ರಾಜಕಾರಣದಲ್ಲಿ ಹಲವಾರು ನ್ಯೂನತೆಗಳು ಎದ್ದು ಕಾಣುತ್ತವೆ.

ಪ್ರಸ್ತುತದಲ್ಲಿ ರಾಜಕೀಯ ಕ್ಷೇತ್ರದಿಂದ ಪ್ರಾರಂಭವಾಗಿರುವ ಮಹಿಳಾ ಮೀಸಲಾತಿ ಶಿಕ್ಷಣ ಕ್ಷೇತ್ರದವರೆಗೂ ಹಬ್ಬಿ ನಿಂತಿದೆ. ರಾಜಕೀಯ ಕ್ಷೇತ್ರದಲ್ಲಿ ನೀಡಬಹುದಾದ ಮೀಸಲಾತಿ ಮಹಿಳಾ ಸಂಕುಲದಲ್ಲಿ ರಾಜಕೀಯ ಅರಿವು ಮೂಡಿಸುವಲ್ಲಿ ಕಾರಣವಾಗುತ್ತದೆ. ಇತ್ತೀಚೆಗೆ ಪಂಚಾಯಿತಿ ಆಡಳಿತ ವ್ಯವಸ್ಥೆಯಿಂದ ಹಿಡಿದು ಪಾರ್ಲಿಮೆಂಟಿನ ಆಡಳಿತ ವ್ಯವಸ್ಥೆವರೆಗೂ ರಾಜಕೀಯವಾಗಿ ಮಹಿಳಾ ಮೀಸಲಾತಿಯನ್ನು ಅನುಸರಿಸಲಾಗುತ್ತಿದೆ. ಕೇವಲ ಮೀಸಲಾತಿಯನ್ನು ಕೊಟ್ಟಾಕ್ಷಣ ಮಹಿಳೆ ಸಮಾನ ಅವಕಾಶಗಳನ್ನು ಪಡೆದುಕೊಳುತ್ತಾಳೆ ಎನ್ನುವ ಅಂಶ ನಗೆಪಾಟಲಾದೀತು. ಪ್ರತಿಯಾಗಿ ತನಗಾಗಿ ಇರುವ ಮೀಸಲಾತಿಯನ್ನು ಮಹಿಳೆ ತನ್ನೊಳಗಿನ ಅಂತಃಶಕ್ತಿಯ ಅರಿವಿನ ಮೂಲಕ ಹೇಗೆ ತನ್ನ ಏಳಿಗೆಗಾಗಿ ಬಳಸಿಕೊಳ್ಳುತ್ತಾಳೆ ಎಂಬುದೇ ಮುಖ್ಯವಾಗಿದೆ.

ದಲಿತ ಮಹಿಳಾ ಸಮುದಾಯಗಳತ್ತ ನೋಡಿದಾಗ ರಾಜಕೀಯ ನಿಜಾಂಶ ವಿಷಯಗಳು ಕಾಣಬಹುದು. ಏಕೆಂದರೆ ದಲಿತ ಮಹಿಳೆಯರಿಗೆ ಕಾನೂನಾತ್ಮಕವಾಗಿ ಅಥವಾ ಸಂವಿಧಾನಾತ್ಮಕವಾದ ಸಮಾನ ಹಕ್ಕುಗಳಿದ್ದರೂ ಸ್ವ ಹಿತಾಸಕ್ತಿ, ವರ್ಗ ಹಿತಾಸಕ್ತಿಯ ಕಾರಣದಿಂದ ಅವಳು ರಾಜಕೀಯದಿಂದ ದೂರ ಉಳಿದಿದ್ದಾಳೆ. ರಾಜಕೀಯಕ್ಕೆ ಸಂಬಂಧಿಸಿದಂತೆ ಆಡಳಿತಾಂಗದ ಅಧಿಕಾರ, ನಾಯಕತ್ವ, ಸಂಘಟನೆ, ಪಕ್ಷ ಎಲ್ಲವೂ ಪುರುಷಕೇಂದ್ರಿತ ಅಥವಾ ಪುರುಷಮಯವಾಗಿರುವುದರಿಂದ ಇಲ್ಲಿ ಮಹಿಳೆಯ ಗೈರುಹಾಜರಿ ಎದ್ದು ಕಾಣಿಸುತ್ತದೆ. ಆಧುನಿಕ ಕಾಲದಲ್ಲಿ ರಾಜಕೀಯಕ್ಕೆ ಹಣ, ಜಾತಿಯ ಬೆಂಬಲ ಅತ್ಯಗತ್ಯ, ಆದರೆ ಜಾತಿಯ ಕಾರಣದಿಂದ ಸಾಮಾಜಿಕ ಜೀವನದಿಂದ ದೂರವೇ ಉಳಿದಿರುವ ದಲಿತ ಮಹಿಳೆಯ ಪಾಲಿಗೆ ಇದು ಅತ್ಯಂತ ದೂರದ ಮಾತೇ ಆಗಿದೆ. ಏಕೆಂದರೆ ಬಡತನ, ಜಾತಿಯ ಕುರಿತಾಗಿ ಅವಳಲ್ಲಿ ಕೀಳರಿಮೆ, ಭಯ, ಹಿಂಜರಿಕೆಗಳ ನಿರಂತರವಾಗಿ ಅವಳು ಪ್ರತಿಯೊಂದು ರಂಗಗಳಲ್ಲಿಯೂ ಹಿಂದುಳಿಯಲಿಕ್ಕೆ ಮುಖ್ಯ ಕಾರಣವಾಗಿವೆ. ಹೀಗೆ ಹಿಂಜರಿಕೆಯ ಕಾರಣಗಳಿಂದಲೇ ಅವಳು ಮುಕ್ತವಾಗಿ, ಸ್ವತಂತ್ರವಾಗಿ, ಸಾಮಾಜಿಕ ಹಾಗೂ ರಾಜಕೀಯ ಜೀವನದಲ್ಲಿ ಭಾಗೀದಾರಳಾಗಲು ಸಾಧ್ಯವಾಗುತ್ತಿಲ್ಲ.

ದಲಿತ ಮಹಿಳಾ ರಾಜಕಾರಣವನ್ನು ಕಾಗದದ ಮೇಲೆ, ಪತ್ರಿಕೆಗಳಲ್ಲಿ, ವೇದಿಕೆಗಳ ಮೇಲೆ ಮಾತ್ರವೇ ಇದೆ. ಒಬ್ಬ ದಲಿತ ಮಹಿಳಾ ಕುಮಾರಿ ಮಾಯಾವತಿ ರಾಷ್ಟ್ರದ ಮುಂಚೂಣಿ ನಾಯಕಿ ಆಗಿದ್ದಾಕ್ಷಣ ಎಲ್ಲ ದಲಿತ ಮಹಿಳೆಯರು ರಾಜಕೀಯವಾಗಿ ಸಬಲರಾಗಿದ್ದಾರೆಂದು ಭಾವಿಸುವುದು ತಪ್ಪಾಗುತ್ತದೆ. ಏಕೆಂದರೆ ಮಾಯಾವತಿಯವರು ದಲಿತ ಸಮುದಾಯದ ಪ್ರತಿನಿಧಿಯಾಗಿದ್ದರೂ ಸಹ ಅವರು ಎಂದಿಗೂ ದಲಿತ ಮಹಿಳೆಯರ ಪರವಾಗಿ ಅಥವಾ ಅವರ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಲಾರರು. ಅವರೇನಿದ್ದರೂ ಪಕ್ಷದೊಳಗಿರುವ ಮೇಲ್ವರ್ಗದವರ ಆಜ್ಞಾಪಾಲಕರಾಗಿಯೇ ಕಾರ್ಯ ನಿರ್ವಹಿಸುವುದು ಸಾಮಾನ್ಯರಿಗೂ ತಿಳಿದಿರುವ ಸಂಗತಿ. ಇಂತಹ ದಲಿತ ಮಹಿಳಾ ರಾಜಕಾರಣವನ್ನು ನಾವು ಸಮಸ್ತ ದಲಿತ ಮಹಿಳಾ ಸಮುದಾಯದೊಂದಿಗೆ ಸಮೀಕರಿಸಿ ಹೇಳಲು ಸಾಧ್ಯವೇ ಇಲ್ಲ. ಏಕೆಂದರೆ ಕುಮಾರಿ ಮಾಯಾವತಿಯವರು ಪೂರ್ಣ ಪ್ರಮಾಣದ ದಲಿತ ಮಹಿಳೆಯರ ಪ್ರತಿನಿಧಿಯಾಗಿಲ್ಲ. ಇದು ಕೇವಲ ಕಲ್ಪಿತ ಆದರ್ಶವೇ ಹೊರತು ವಾಸ್ತವ ಆದರ್ಶವಲ್ಲ. ಆದರೆ ದಲಿತ ಮಹಿಳಾ ರಾಜಕಾರಣವನ್ನು ಇದರಿಂದ ಊಹೆ ಮಾಡಿಕೊಳ್ಳಬಹುದು. ಇದು ದೇಶದ ಮೇಲುಸ್ತರದ ದಲಿತ ಮಹಿಳೆಯ ಸ್ಥಿತಿಯಾದರೆ

ಗ್ರಾಮ ಸ್ವರಾಜ್ಯದ ಕೂಸಾಗಿರುವ ಪಂಚಾಯತ್ ರಾಜ್ ಸಂಸ್ಥೆಯೊಳಗಿನ ದಲಿತ ಮಹಿಳೆಯ ಸ್ಥಿತಿ ಇದಕ್ಕಿಂತ ತುಂಬ ನಿಕೃಷ್ಟವಾಗಿದೆ. ಈ ಎರಡೂ ಕಡೆಯಲ್ಲಿಯೂ ದಲಿತ ಮಹಿಳೆ ಉನ್ನತ ವರ್ಗದ ಪುರುಷರ ಹಿಡಿತದಲ್ಲಿಯೇ ರಾಜಕೀಯ ಆಟ ಆಡುತ್ತಿದ್ದಾಳೆ.

ಕೇವಲ ಒಂದು ಮೀಸಲು ಸ್ಥಾನದಿಂದಲೇ ರಾಜಕೀಯ ಅಸ್ತಿತ್ವವನ್ನು ಕಾಣಲು ಪರದಾಡುತ್ತಿರುವ ದಲಿತ ಮಹಿಳೆ ಪೂರ್ಣ ಪ್ರಮಾಣದ ರಾಜಕಾರಣಿಯಾಗಿ ಬದಲಾಗಲು ಸಾಧ್ಯವಿಲ್ಲದಂತಹ ಸ್ಥಿತಿ ಇಂದು ನಿರ್ಮಾಣವಾಗಿದೆ. ಒಂದು ವೇಳೆ ಹಾಗೇನಾದರೂ ಆದರೆ ಅದು ದಲಿತ ಮಹಿಳಾ ರಾಜಕಾರಣ ಅನಿಸುವುದಿಲ್ಲ. ದಲಿತ ದೃಷ್ಟಿಕೋನ ಒಂದು ಸಮುದಾಯ, ಸಮಾಜದ ದೃಷ್ಟಿಕೋನವಾದಾಗ ಮಾತ್ರ ಅದು ದಲಿತ ಮಹಿಳಾ ರಾಜಕಾರಣವಾಗಬಲ್ಲದು. ಕೇವಲ ಶಾಸನಾತ್ಮಕವಾಗಿ ಸಿಕ್ಕ ರಾಜಕೀಯ ಅವಕಾಶಗಳಿಂದಲೇ ಅದನ್ನು ದಲಿತ ಮಹಿಳಾ ರಾಜಕಾರಣ ಎಂದು ಭಾವಿಸಬಹುದಾದರೂ ಅದು ಕೇವಲ ಜಾತಿಗೇ ಸೀಮಿತ ಮಾಡಬೇಕು ಎಂಬುದು ತುಂಬ ತಪ್ಪಾಗುತ್ತದೆ. ಅದನ್ನು ಜಾತಿಯೊಳಗೆ ನೋಡಬೇಕೆಂದರೆ ಅದು ಪ್ರಧಾನಧ್ವನಿಯ ಜೊತೆಗೆ ಉಪ ಧ್ವನಿಯಾಗಿ ಉಳಿಯುವ ಸಂಭವವಿರುತ್ತದೆ. ಹೀಗೆ ಪ್ರಧಾನಧ್ವನಿಯೊಳಗೆ ಉಪಧ್ವನಿಯಾಗುತ್ತಿರುವ ದಲಿತ ಮಹಿಳೆಯನ್ನು ಇಟ್ಟುಕೊಂಡೆ ಪಿತೃ ಪ್ರಧಾನತೆಯ ಜೊತೆಗೆ ಯಾಜಮಾನ್ಯ ಶಾಹಿ, ಪುರುಷಶಾಹಿ, ಉಳಿಗಮಾನ್ಯಶಾಹಿಗಳನ್ನು ಎದುರಿಸಿ ಅವಳು ಅಧಿಕಾರ ಚಲಾಯಿಸುವಂತಾದರೆ ಅದು ನಿಜವಾದ ದಲಿತ ಮಹಿಳಾ ರಾಜಕಾರಣ ಎನಿಸಿಕೊಳ್ಳಬಲ್ಲದು.

ಅಂಚಿನ ಸಮುದಾಯಗಳಿಗೆ ನಿಕೃಷ್ಟತೆಗೆ ಹಲವು ಬಗೆಗಳಿವೆ. ಅವುಗಳಲ್ಲಿ ಅಸಮಾನತೆಯೂ ಒಂದು. ಇಂತಹ ಅಸಮಾನತೆಯ ಎಳೆಯೊಳಗೆಯೇ ಲಿಂಗಅಸಮಾನತೆ, ಲಿಂಗ ಸಂಬಂಧಿ ಅಸಮಾನತೆಗಳು ಭಾಗಿಯಾಗಿವೆ. ಆದ್ದರಿಂದಲೇ ಲಿಂಗಸಂಬಂಧಿ ಅಸಮಾನತೆಗಳನ್ನು ವಿರೋಧಿಸುವುದೆಂದೆ. ಅರ್ಥ. ಜನಾಂಗ ಸಂಬಂಧಿ, ಲಿಂಗಸಂಬಂಧಿ, ವರ್ಗಸಂಬಂಧಿ, ಅಂಶಗಳು ಮಹಿಳೆಯನ್ನು ಸಮಾಜದಲ್ಲಿ ವಿಭಜಿಸಿ ಅವಳನ್ನು ಅತಂತ್ರಕ್ಕೆ ತುಳಿದಿರುವುದು ಮಾತ್ರ ಸತ್ಯ. ವಿಶ್ವದ ಮೂರನೆಯ ಬಡರಾಷ್ಟ್ರಗಳಲ್ಲಿ ಮಹಿಳೆಯರ ಸ್ಥಿತಿ ಇಂದು ವಾಸ್ತವವಾಗಿ ಇಂತಹ ಅವಗಾಹನೆಗೆ ಒಳಗಾಗಿದೆ. ಭಾರತದ, ಕರ್ನಾಟಕದಲ್ಲಿ ಅಭಿವೃದ್ಧಿಯನ್ನು ದಲಿತ ಮಹಿಳೆ ನೆಲೆಯಿಂದಲೇ ಪರಿಭಾವಿಸಿಕೊಳ್ಳಬೇಕಾಗಿದೆ. ದಲಿತ ಮಹಿಳೆಯರ ಬದುಕು ಅಭಿವೃದ್ಧಿಯ ಎಲ್ಲ ಹಿತಾಸಕ್ತಿಗಳನ್ನು ಹಾಗೂ ಸಾಮುದಾಯಿಕ ಜೀವನದ ಮೌಲ್ಯಾಚರಣೆಗಳನ್ನು ಪ್ರತಿನಿಧಿಸುತ್ತಿರುತ್ತದೆ. ದಲಿತ ಮಹಿಳೆಯರ ಬದುಕು, ಸಮಾಜದ ಅಂಚಿನಲ್ಲಿರುವ ಎಲ್ಲ ಸೌಲಭ್ಯಗಳ ವಂಚಿತರ ಬದುಕನ್ನು ಪ್ರತಿನಿಧಿಸುತ್ತಿರುತ್ತದೆ. ಲಿಂಗಸಂಬಂಧ ಅಭಿವೃದ್ಧಿ ಮೀಮಾಂಸೆಯೂ ಕೇವಲ ಮಹಿಳೆಯನ್ನು ಮಾತ್ರವೇ ಒಳಗೊಂಡಿರುವ ಸಂಕಥನವಲ್ಲ. ಅದು ಜನಪರವೂ, ಸಮಾಜಮುಖಿಯೂ ಲಿಂಗಸೃಷ್ಟಿಯೂ ಆಗಿದೆ.

ರಾಜಕೀಯ ಚಟುವಟಿಕೆಗಳಲ್ಲಿ ದಲಿತ ಮಹಿಳೆಯು ತೊಡಗಿಕೊಂಡಿದ್ದಾಳೆ. ಇದರಲ್ಲಿ ಯಾವುದೇ ಆಕ್ಷೇಪಣೆಯೂ ಇಲ್ಲ. ಆದರೆ ಅವಳ ರಾಜಕೀಯ ಚಟುವಟಿಕೆ, ಭಾಗವಹಿಸುವಿಕೆ, ಜವಬ್ದಾರಿ ತೆಗೆದುಕೊಳ್ಳುವಿಕೆ ಆಕೆಗೆ ಪ್ರಧಾನವಾಗಿ ಬಂದದ್ದಲ್ಲ, ಬದಲಿಗೆ ಅದು ಕೇವಲ ಆನುಷಂಗಿಕ ನೆಲೆಯಿಂದ ಬಂದದ್ದು ಎಂಬುದು ಹಿಂದಿನ ಅಧ್ಯಾಯಗಳಲ್ಲಿ ಅರಿತುಕೊಂಡಿದ್ದೇವೆ. ಇತರ ಸವರ್ಣೀಯ ಮಹಿಳೆಯರಂತೆ ದಲಿತ ಮಹಿಳೆಗೂ ಸಹ ಗೃಹಕೃತ್ಯದ ಹೊರೆ ಇದೆ. ರಾಜಕೀಯ ಭಾಗವಹಿಸುವಿಕೆ ಕೇವಲ ಪುರುಷರಿಗಷ್ಟೆ ಸೀಮಿತವಲ್ಲ. ಅಲ್ಲಿ ಮಹಿಳೆಯ ಪಾಲು ಸಹ ಇದೆ. ರಾಜಕಾರಣದಲ್ಲಿ ಪುರುಷರಿಗಿರುವಷ್ಟೇ

ಸ್ಥಾನಮಾನಗಳು, ಜವಾಬ್ದಾರಿಗಳು, ಮಹಿಳೆಗೂ ಇವೆ ಎಂದು ತೋರಿಸಿಕೊಟ್ಟಿವೆ.

ರಾಜಕಾರಣದಲ್ಲಿರುವ ಹಿಂಸೆ, ಲಾಬಿಗಳು, ಕ್ರೌರ್ಯ, ಲಂಚ, ರುಷುವತ್ತುಗಳು, ಭಯೋತ್ಪಾದನೆ, ಅಭದ್ರತೆ, ಜೀವಭೀತಿಯ ಕಾರಣದಿಂದ ದಲಿತ ಮಹಿಳೆಯರು ರಾಜಕೀಯ ಪಕ್ಷದಿಂದ ಹೊರಗುಳಿಯಬೇಕಾಗಿದೆ. ಸ್ವಾತಂತ್ರ್ಯಪೂರ್ವ ಸ್ಥಿತಿಗೆ ಹೋಲಿಸಿದರೆ ಇದು ವಿನಾಶಕಾರಿ ಬೆಳವಣಿಗೆಯಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಗಾಂಧೀಜಿಯವರಂತಹ ನೇತಾರರ ವಿಚಾರಧಾರೆಗಳಿಂದ ಸ್ಫೂರ್ತಿಗೊಂಡು ವಿದ್ಯಾವಂತರು ಸಮಾಜದಲ್ಲಿ ಉತ್ತಮ ಸ್ಥಾನಮಾನಗಳನ್ನು ಪಡೆದುಕೊಂಡಿದ್ದ ಸಂಪ್ರದಾಯಸ್ಥ ಕುಟುಂಬಗಳಿಂದ ಮಹಿಳೆಯರು ರಾಜಕಾರಣಕ್ಕೆ ಬರುತ್ತಿದ್ದರು. ೧೯೩೦ರಲ್ಲಿಯೇ ಮೀಸಲು ಕ್ಷೇತ್ರದಿಂದ ೪೩ ಮಂದಿ, ಸಾಮಾನ್ಯ ಕ್ಷೇತ್ರದಿಂದ ೮ ಮಂದಿ ಮಹಿಳೆಯರು ಶಾಸಕಾಂಗ ಸಭೆಗಳಿಗೆ ಆಯ್ಕೆಯಾಗಿ ಬಂದಿದ್ದರಲ್ಲದೆ, ಕ್ಯಾಬಿನೆಟ್ ದರ್ಜೆಯ ಆರು ಮಹಿಳಾ ಮಂತ್ರಿಗಳಿದ್ದು ಸ್ತುತ್ಯರ್ಹವಾದ ಸಂಗತಿಯಾಗಿದೆ.

ಆದರೆ ಸ್ವಾತಂತ್ರ್ಯ ಬಂದ ಮೇಲೆ ಈ ಸಂಖ್ಯೆ ಹಾಗೂ ಪಾಲ್ಗೊಳ್ಳುವಿಕೆ ಹೆಚ್ಚಾಗುವುದರ ಬದಲು ಕ್ಷೀಣಿಸಿದೆ. ಹಾಗೆಯೇ ಉದಾರವಾದಿ ನೆಲೆಯಲ್ಲಿ ರೂಪು ಮಡೆದ ಪಂಚಾಯತ್ ರಾಜ್ ಸಂಸ್ಥೆಯು ಸಹ ಮೇಲಿನ ಅಂಶಕ್ಕೆ ಹೊರತಾಗಿಲ್ಲ ಎಂದೇಳಬಹುದು. ಕರ್ನಾಟಕ ಸರ್ಕಾರ ಜಾರಿಗೊಳಿಸಿದ ಪಂಚಾಯತ್ ರಾಜ್ ಅಧಿನಿಯಮವು ಸಹ ಅಂಚಿನ ಸಮುದಾಯಗಳಿಗೆ ಅಧಿಕಾರದ ಬಲ ನೀಡಲು ಶ್ರಿ ದೇವರಾಜ ಅರಸು, ನಜೀರ್ ಸಾಬ್ ಕಾಲಾವಧಿಯಲ್ಲಿ ಹತ್ತು ಹಲವು ಬಗೆಯಲ್ಲಿ ಅಂಚಿನ ಸಮುದಾಯಗಳಿಗಾಗಿ ಶ್ರಮಿಸಿತು. ಗಾಂಧೀಜಿ, ಜೆ.ಪಿ. ಲೋಹಿಯಾ ಕಂಡಂತಹ ಪೂರ್ಣ ಸ್ವರಾಜ್ಯದ ಆಶಯಕ್ಕೆ ಕರ್ನಾಟಕ ಸರಕಾರದ ಪಾತ್ರ ಹತ್ತಿರವಾಗಿತ್ತು. ಹಿಂದುಳಿದ, ಅಂಚಿನ ಸಮುದಾಯಗಳ ಏಳಿಗೆಯನ್ನೇ ತಮ್ಮ ಪ್ರಮುಖ ಮಾನದಂಡವನ್ನಾಗಿಸಿಕೊಂಡ ಅರಸು ಸರಕಾರ ಹಲವಾರು ಮಹತ್ತರ ಯೋಜನೆಗಳನ್ನು, ಅವಕಾಶಗಳನ್ನು, ಮೀಸಲಾತಿಯನ್ನು ನೀಡುವುದರ ಮೂಲಕ ದಲಿತ, ಹಿಂದುಳಿದ ಸಮುದಾಯಗಳ ಆಶಾಕಿಣರವಾದರು.

ಹಿಂದುಳಿದ ಮತ್ತು ದಲಿತ ಎಂದು ಮಧ್ಯಮ ಮತ್ತು ಕೆಳಜಾತಿಗಳನ್ನು ಸಂಬೋಧಿಸುವುದು ತಿಳಿಯದ ವಿಷಯವಲ್ಲ. ತಿಳಿದ ಸಂಗತಿಗಳು ಈ ದಲಿತ, ಹಿಂದುಳಿದ ಪದಗಳ ಅರ್ಥ ವಿಸ್ತೃತವಾದದ್ದು ಇವುಗಳಲ್ಲಿ ಅಸಂಖ್ಯಾತ ಜಾತಿಗಳಿರುವುದು ಸರ್ವರಿಗೂ ವೇದ್ಯ. ಇವುಗಳಲ್ಲಿ ಕೆಲವು ಚಾಲಾಕಿ ಜಾತಿಗಳು ಮೇಲ್ಜಾತಿಗಳ ತಂತ್ರ, ಕುತಂತ್ರ ಅಳವಡಿಸಿಕೊಂಡಿವೆ. ಗುಲಾಮಗಿರಿ ಕಳಚಿಕೊಂಡು ಆಳುವ ಮನಃಸ್ಥಿತಿಗೆ ರೂಪಾಂತರಗೊಳ್ಳುತ್ತಿವೆ. ಇದು ತಪ್ಪಲ್ಲ. ಶೋಷಿತ ರಾಜಕೀಯ ವ್ಯವಹಾರಗಳಿಗೆ ಜನತಂತ್ರದ ದೊಡ್ಡ ಕಾಣಿಕೆ, ಎಲ್ಲರ ಪರವಾಗಿ ರಾಜಕೀಯ ವ್ಯವಹಾರಗಳಿಗೆ ಮುಂದಾಗುವ ಚಾಲಾಕಿ ಜಾತಿಗಳು ಒಳಗೊಳಗೆ ತಮಗೆ ಅನುಕೂಲವಾಗುವ ಹಾಗೆ ಸಂಧಾನ ಕುದುರಿಸಿಕೊಳ್ಳುತ್ತವೆ. ತರುವಾಯ ರಾಜಕೀಯ ಚಟುವಟಿಕೆಯಲ್ಲಿ ಅಧಿಕಾರ ಪಲ್ಲಟವು ಆಗಲಾರಂಭಿಸುತ್ತದೆ.

ದಲಿತ ಸಮುದಾಯದೊಳಗೆ ಕೆಲವು ಸ್ಪೃಶ್ಯ, ಪ್ರಬಲ, ಜಾತಿಗಳು ಮುಂದುವರಿದವರ ಹುಸಿ ಆಸೆಗಳಿಗೆ ತಮ್ಮ ಅಸ್ತಿತ್ವವನ್ನೇ ಅವರಿಗೆ ಮಾರಿಕೊಂಡಿದ್ದಾರೆ. ಹೀಗಾಗಿ ದಲಿತ ಸಮುದಾಯದೊಳಗಿನ ಇತರ ಜಾತಿಗಳು ಅವರ ಸೇವಕರಾಗಿಯೇ, ಅವರ ಆಜ್ಞಾನುಸಾರ ತಮ್ಮತನವನ್ನು ಅವರಿಗೆ ಒಪ್ಪಿಸಿದ್ದಾರೆ. ಈ ಕಾರಣಗಳಿಂದಲೇ ದಲಿತ ಮಹಿಳೆಯ ರಾಜಕೀಯ ಅಸ್ತಿತ್ವ ಕುಂಠಿತಗೊಂಡಿದೆ. ದಲಿತ ಸಮುದಾಯದಲ್ಲಿನ ಕೆಲವು ಜಾತಿಗಳು ಉಳಿಗಮಾನ್ಯಶಾಹಿಗೆ ಶರಣಾಗಿ ಅವರ ಇಚ್ಚೆಯಂತೆ ನಡೆದು ಅಲ್ಪ ಸ್ವಲ್ಪ ರಾಜಕೀಯ ಅವಕಾಶ ಬಳಸಿಕೊಂಡಿವೆಯಾದರೂ ಅದಕ್ಕಿಂತ ತಳಸಮುದಾಯಗಳಿಗೆ ಅದರ ಅವಕಾಶವೇ ಇಲ್ಲ. ಈ

ಎಲ್ಲ ಕಾರಣಗಳಿಂದ ದಲಿತ ಮಹಿಳಾ ರಾಜಕೀಯ ಭವಿಷ್ಯ, ಅಸ್ತಿತ್ವ, ಪಾಲ್ಗೊಳ್ಳುವಿಕೆ ಹೆಸರಿಗೆ ಮಾತ್ರವೇ ಎಂಬಂತಾಗಿದೆ. ಮೇಲ್ಜಾತಿಯವರ ತಾಳಕ್ಕೆ ತಕ್ಕಂತೆ ನಡೆಯುತ್ತಲೇ ತನಗೆ ಸಿಕ್ಕ ಅವಕಾಶವನ್ನು ಮರೀಚಿಕೆ ಮಾಡಿಕೊಳ್ಳುತ್ತಿದ್ದಾಳೆ. ದಲಿತ ಸಂಘಟನೆಗಳ ಸಮಾವೇಶಗಳು ಕೆಲವು ಡೋಂಗಿ ದಲಿತ ನಾಯಕರ ರಾಜಕೀಯ ಬೆಳವಣಿಗೆಗೆ, ಅಸ್ತಿತ್ವಕ್ಕಾಗಿಯೇ ನಡೆಯುತ್ತಿರುವುದರಿಂದ ಅಲ್ಲಿ ಮಹಿಳೆ ಜನ ಬೆಂಬಲದ ಸಮವಾಗಿ ಅಲ್ಲಿ ಭಾಗಿಯಾಗುತ್ತಿದ್ದಾಳಷ್ಟೆ. ಹೀಗೆ ತಳಸಮುದಾಯಗಳಲ್ಲಿಯೇ ಅವಳ ರಾಜಕೀಯ ಭವಿಷ್ಯಕ್ಕೆ ಅವಕಾಶವಿಲ್ಲದಿರುವಾಗ ಮುಂದಿನ ಹಂತಗಳ ಬಗ್ಗೆ ಅವಳ ಸ್ಥಿತಿ ಹೇಗಿರಬಹುದೆಂದು ಊಹಿಸಬಹುದು. ಪಂಚಾಯಿತಿಗಳ ಮಟ್ಟದಲ್ಲಿಯಂತೂ ಅವಳ ಗಂಡ, ತಂದೆ, ಸಹೋದರ ಅವಳ ರಾಜಕೀಯಾಧಿಕಾರವನ್ನು ತಮ್ಮ ಮುಂದಿನ ರಾಜಕೀಯ ಭವಿಷ್ಯಕ್ಕಾಗಿ, ಅಸ್ತಿತ್ವಕ್ಕಾಗಿ ಒಂದು ವೇದಿಕೆಯನ್ನಾಗಿಸಿಕೊಳ್ಳುತ್ತಿದ್ದಾಳೆ. ಅವಳ ಅಧಿಕಾರವೆಲ್ಲವು ಪುರುಷರ ರಾಜಕೀಯ ಅಸ್ತಿತ್ವಕ್ಕಾಗಿಯೇ ರೂಪಿತವಾದಂತಿದೆ. ತನಗೆ ರಾಜಕೀಯವಾಗಿ ಮುಂದೆ ಬರಲು ಅವಕಾಶ ಮಾಡಿಕೊಟ್ಟು ತನ್ನ ಎಲ್ಲ ಅಧಿಕಾರ ಅವನಿಗೆ ಒಪ್ಪಿಸಿದ್ದ ದಲಿತ ಮಹಿಳೆ ಪುರುಷಾಧಿಕಾರ ಕುರಿತಂತೆ ಚಕಾರವೆತ್ತದೆ ಇದ್ದ ಅವಧಿಯಲ್ಲಿಯೇ ಅಧಿಕಾರ ಚಲಾಯಿಸಿದೆ ಎಂಬ ನಂಬಿಕೆಯಿಂದಲೇ ಅದನ್ನು ಪುನಃ ಪುನಃ ಮೆಲುಕು ಹಾಕುತ್ತಲೇ ನಡೆಯುತ್ತಿದ್ದಾಳೆ.

ಭಾರತದಲ್ಲಿ ಮಹಿಳೆಯರು ಸಂಸತ್ತು ಮತ್ತು ವಿಧಾನಸಭೆಗಳಿಗೆ ಚುನಾಯಿತರಾಗುವ ಪ್ರಮಾಣದಲ್ಲಿ ಏರುಪೇರು ಇರುವುದನ್ನು ಕಾಣಬಹುದು. ನಮ್ಮ ದೇಶದ ಸಂಸತ್ತಿನಲ್ಲಿ ಮಹಿಳೆಯರ ಪ್ರಾತಿನಿಧ್ಯ ಶೇ. ೯ನ್ನು ಮೀರಿಲ್ಲ. ಮಹಿಳೆಯರು ನಿರಂತರವಾಗಿ ತಮ್ಮ ಹಕ್ಕುಗಳಿಗೆ ಹೋರಾಟ ಮಾಡುತ್ತಲೇ ಬಂದಿದ್ದರೂ ರಾಜ್ಯಗಳ ವಿಧಾನ ಮಂಡಲಗಳಲ್ಲಿ ಅವರ ಸಂಖ್ಯೆ ಶೇ. ೧೦ ದಾಟಿಲ್ಲ. ಇಷ್ಟೊಂದು ವಿಶಾಲವಾದ ರಾಜಕೀಯ ಕ್ಷೇತ್ರದಲ್ಲಿ ಇಷ್ಟೊಂದು ಕಡಿಮೆ ಪ್ರಮಾಣದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ದೊರೆತಿರುವುದು ಮಹಿಳಾ ಸಶಕ್ತತೆಯ ಚರಿತ್ರೆಯಲ್ಲಿ ಕಾಣುವ ಶೋಚನೀಯ ವಾಸ್ತವ.

**ರಾಜಕೀಯ ಕ್ಷೇತ್ರ ಮತ್ತು ಪಂಚಾಯಿತಿಗಳಲ್ಲಿ ದಲಿತ ಮಹಿಳೆಯರು**

**ಪುರುಷರೇ ಮೇಲುಗೈ:** ರಾಜಕೀಯ ದಲಿತ ಮಹಿಳೆಯರ ಭಾಗವಹಿಸುವಿಕೆಯಲ್ಲಿ ಹಿಂದುಳಿಯಲು ಕಾರಣವೆಂದರೆ ಈಗಿರುವ ಪ್ರತಿಕೂಲ ಹಾಗೂ ಬೆಂಬಲವಿಲ್ಲದ ವಾತಾವರಣದಲ್ಲಿ ದಲಿತ ಮಹಿಳೆಯರ ಬದುಕು ಶೋಚನೀಯ. ಪಂಚಾಯಿತಿಗಳಲ್ಲಿ ದಲಿತ ಮಹಿಳೆಯರು ತಮ್ಮನ್ನು ಎಲ್ಲರಲ್ಲಿ ತಾವು ಒಬ್ಬರು ಎನ್ನುವಂತಹ ವಾತಾವರಣವಿಲ್ಲದಂತಾಗಿ ಸಂಪೂರ್ಣ ನಿರುತ್ಸಾಹಗೊಂಡಿದ್ದಾರೆ. ಪ್ರಸ್ತುತ ದಿನಗಳಲ್ಲಿ ರಾಜಕೀಯ ರಂಗದ ಅಪರಾಧೀಕರಣ ಅಧಿಕವಾಗುತ್ತಿದ್ದು ಮಹಿಳಾ ಕಾರ್ಯಕರ್ತರು ಕಿರುಕುಳ ಹಾಗೂ ಕೊಲೆಗಳಿಗೂ ಸಹ ಈಡಾಗುತ್ತಿದ್ದಾರೆ. ಪ್ರಜಾಸತ್ತಾತ್ಮಕ ತೀರ್ಮಾನ ಕೈಗೊಳ್ಳುವಿಕೆಯ ಪ್ರಕ್ರಿಯೆಯಲ್ಲಿ ದಲಿತ ಮಹಿಳೆಯರನ್ನು ಕಡೆಗಣಿಸಿರುವುದು, ಈ ರಾಜಕಾರಣ ಬಹುಪಾಲು ಪ್ರಬಲ ಪುರುಷಾಧಿಪತ್ಯದ ಕೈಯಲ್ಲಿರುವುದು.

**ಸಾಂಪ್ರದಾಯಿಕ ದೃಷ್ಟಿಕೋನ ಮತ್ತು ನಿಲುವುಗಳು:** ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರು ಭಾಗವಹಿಸದಿರುವುದಕ್ಕೆ ಇನ್ನೊಂದು ಮುಖ್ಯ ಅಂಶವೆಂದರೆ ಸಮಾಜದ ಸಾಂಪ್ರದಾಯಿಕ ದೃಷ್ಟಿಕೋನ ಮತ್ತು ನಿಲುವುಗಳು. ದಲಿತ ಮಹಿಳೆಯರು ತಮ್ಮ ಕೆಲಸ ಕಾರ್ಯಗಳನ್ನು ತಮ್ಮ ಮನೆಗಳಿಗೆ ಮಾತ್ರ ಸೀಮಿತಗೊಳಿಸಬೇಕೆಂಬುದು. ಇಂದಿಗೂ ಮುಂದುವರಿದ ಮನೆಯಲ್ಲಿ ಗಂಡುಮಕ್ಕಳಿಗೆ ಕೊಡುವ ಸ್ವಾತಂತ್ರ್ಯ ಹೆಣ್ಣುಮಕ್ಕಳಿಗೆ ಕೊಡುವುದಿಲ್ಲ. ಹೀಗಾಗಿ ಮಹಿಳೆಯರಿಗೆ ಹೊರ ಪ್ರಪಂಚದ ಅರಿವು, ಒಡನಾಟ ಅಷ್ಟಕ್ಕಷ್ಟೆ.

ಮಹಿಳೆಯರ ಬಗ್ಗೆ ಬದಲಾದಾಗ ಸಾಮಾಜಿಕ ದೃಷ್ಟಿಕೋನ ಇಂದಿಗೂ ಮಹಿಳೆ ರಾಜಕೀಯಕ್ಕೆ ಪ್ರವೇಶಿಸಲು ಸಾಧ್ಯವಾಗುತ್ತಿಲ್ಲ.

**ಘನತೆ–ಗೌರವಕ್ಕೆ ಧಕ್ಕೆ:** ದಲಿತ ಮಹಿಳೆಯರು ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿದರೆ ಕುಟುಂಬವ್ಯವಸ್ಥೆ ಅಸ್ಥಿರಗೊಳ್ಳುವುದು, ರಾಜಕಾರಣದಲ್ಲಿ ಯಶಸ್ವಿಯಾಗಲು ಅನುಸರಿಸಬೇಕಾದ ಮಾರ್ಗಗಳು ಮಹಿಳೆಯರ ಘನತೆ ಗೌರವಕ್ಕೆ ಧಕ್ಕೆಯನ್ನುಂಟು ಮಾಡುತ್ತವೆ ಎನ್ನುವ ಕಾರಣಕ್ಕಾಗಿ ದಲಿತ ಮಹಿಳೆಯರ ರಾಜಕೀಯ ಪ್ರವೇಶವನ್ನು ನಿರಾಕರಿಸಲಾಗುತ್ತಿದೆ.

**ರಾಜಕೀಯ ಪ್ರಜ್ಞೆ ಮತ್ತು ಶಿಕ್ಷಣದ ಕೊರತೆ:** ಬಡತನದ ಬೇಗೆಯಲ್ಲಿರುವ ಕುಟುಂಬಗಳಿಗೆ ಹುಡುಗಿಯರನ್ನು ಶಾಲೆಗೆ ಕಳುಹಿಸುವುದರಲ್ಲಿ ಯಾವ ಅರ್ಥವೂ ಇಲ್ಲ. ಅವರು ಏನಿದ್ದರೂ ಮನೆಯಲ್ಲೇ ಇದ್ದು, ಉರುವಲು ಒಟ್ಟು ಮಾಡುವುದು, ಮನೆ, ಮಕ್ಕಳನ್ನು ನೋಡಿಕೊಳುವುದು ಈ ರೀತಿಯ ಮನೆಗೆಲಸಗಳು. ನಮ್ಮ ಕೇರಿಗಳಲ್ಲಿ ಇಂತಹ ಮಕ್ಕಳು ತುಂಬಾ. ಮೈ ಮೇಲೆ ಒಂದು ತುಂಡು ಬಟ್ಟೆಯೂ ಇಲ್ಲದೆ ಅಲೆದಾಡುತ್ತಿರುತ್ತಾರೆ. ಹೀಗೆ ದಲಿತ ಮಹಿಳೆಯರಲ್ಲಿ ರಾಜಕೀಯ ಶಿಕ್ಷಣದ ಕೊರತೆಯ ಕಾರಣದಿಂದ ರಾಜಕೀಯ ಕ್ಷೇತ್ರದಲ್ಲಿ ಹಿಂದುಳಿಯಲು ಕಾರಣವಾಗಿದೆ. ಬಹುತೇಕ ದಲಿತ ಮಹಿಳೆಯರು ಅನಕ್ಷರತೆಯಿಂದ ಕೂಡಿರುವುದು, ಇದರಲ್ಲಿ ದಲಿತ ಮತ್ತು ಹಿಂದುಳಿದ ಮಹಿಳೆಯರನ್ನು ದೂರ ತಳ್ಳಲ್ಪಟ್ಟಿರುವುದು, ಬಹುತೇಕ ಪುರುಷರು ಈ ಅವಕಾಶವನ್ನು ಪಡೆದು ಮಹಿಳೆಯರನ್ನು ಮೂಲೆಗುಂಪು ಮಾಡುತ್ತಾರೆ.

**ರಾಜಕೀಯ ನಾಯಕತ್ವದ ಕೊರತೆ:** ದಲಿತ ಮಹಿಳೆಯರಲ್ಲಿ ರಾಜಕೀಯ ಮುಖಂಡತ್ವ/ನಾಯಕತ್ವ ಲಕ್ಷಣಗಳ ಕೊರತೆ ಕಾರಣ ರಾಜಕೀಯದಲ್ಲಿ ಪ್ರವೇಶ ಮಾಡಲು ಹಿಂಜರಿಕೆ ಉಂಟಾಗುತ್ತಿದೆ. ಜೊತೆಗೆ ಮಹಿಳಾ ಸಂಘಟನೆಯಲ್ಲಿನ ಸಾಮರ್ಥ್ಯದ ಕೊರತೆಯೂ ಕಾರಣವೆನಿಸಿದೆ. ರಾಜಕೀಯಕ್ಕೆ ಮಾನಸಿಕವಾಗಿ ಸಿದ್ಧವಾಗಿದ್ದರೂ ಸಂಘಟನಾ ಚತುರತೆ ಕಡಿಮೆ ಇದೆ. ಪುರುಷಪ್ರಧಾನ ಸಮಾಜದಲ್ಲಿ ಏನೂ ಮಾಡಲಾಗದಂತಹ ಆಂತರಿಕ ಮನೋಭಾವ ಅವರನ್ನು ಕಾಡುತ್ತಿದೆ. ಒಂದು ವೇಳೆ ರಾಜಕೀಯ ನಾಯಕತ್ವ ಪಡೆದರೆ ಸಮಾಜದ ಅವಹೇಳನಕ್ಕೆ ಗುರಿಯಾಗುತ್ತಾರೆ. ಕಾರಣ ಆಕೆಯ ಸ್ವಾಭಿಮಾನಕ್ಕೆ ಧಕ್ಕೆಯಾಗುತ್ತದೆಂಬ ಭಯವಿದೆ.

**ಹಣ ಬಲ ಮತ್ತು ತೋಳ್ಬಲದ ಕೊರತೆ:** ದಲಿತ ಮಹಿಳೆಯರಿಗೆ ಚುನಾವಣೆ ಸಮಯದಲ್ಲಿ ಹಣಬಲ ಮತ್ತು ತೋಳ್ಬಲದ ಕೊರತೆಯು ರಾಜಕೀಯದಿಂದ ದೂರ ಉಳಿಯಲು ಕಾರಣವಾಗಿದೆ. ರಾಜಕೀಯದೊಂದಿಗೆ ಮನೆಯ ಜವಾಬ್ದಾರಿಯನ್ನು ಹೊರಬೇಕಾಗಿರುವುದು. ಕೌಟುಂಬಿಕ ಹೊಣೆಗಾರಿಕೆಯನ್ನು ಹೊರುತ್ತಿರುವುದು ಸಹ ಕಾರಣವಾಗಿದೆ. ಪುರುಷ ಸಮಾಜವು ಮಹಿಳೆಯರನ್ನು ರಾಜಕೀಯದಲ್ಲಿ ತೊಡಗಿಸಿ ಹಣ ಖರ್ಚು ಮಾಡಲು ಸಿದ್ಧರಿಲ್ಲ. ಆಕೆಯನ್ನು ರಾಜಕೀಯಕ್ಕೆ ಕಳುಹಿಸಿದರೆ ಕೌಟುಂಬಿಕ ನಿರ್ವಹಣೆಗೆ ಅಡಚಣೆ ಮತ್ತು ಅವರು ದೈಹಿಕವಾಗಿ ಸಮರ್ಥರಲ್ಲದಿರುವುದು ಕಾರಣವಾಗಿದೆ.

**ರಾಜಕೀಯದಲ್ಲಿ ಅನುಭವದ ಕೊರತೆ:** ರಾಜಕೀಯದಲ್ಲಿ ಅನಾಸಕ್ತಿ ಮಹಿಳೆಯರನ್ನು ರಾಜಕೀಯದಲ್ಲಿ ಹಿಂದುಳಿಸಲು ಕಾರಣವಾಗಿದೆ. ರಾಜಕೀಯ ಅನುಭವ, ಅರಿವು ಇಲ್ಲದಿರುವುದು ಹಾಗೂ ಮಹಿಳೆ ಕುಟುಂಬ ರಾಜಕೀಯ ಹಿನ್ನೆಲೆಯ ಕೊರತೆಯಿಂದಾಗಿ ರಾಜಕೀಯಕ್ಕೆ ಪ್ರವೇಶಿಸಲು ಹಿಂದೇಟು ಹಾಕುತ್ತಿರುವುದು ಸಹ ಕಾರಣವಾಗಿದೆ.

**ಭಯ, ಹಿಂಜರಿಕೆ ಮತ್ತು ಸಂಕೋಚದ ಸ್ವಭಾವಗಳು:** ದಲಿತ ಮಹಿಳೆಯರಲ್ಲಿ ಕೀಳರಿಮೆ ಭಾವನೆ, ಹಿಂಜರಿಕೆ ಸ್ವಭಾವಗಳು, ರಾಜಕೀಯ ಕ್ಷೇತ್ರದಲ್ಲಿ ಪ್ರವೇಶಿಸಲು ಸಮಸ್ಯೆಯಾಗಿದೆ. ಇಂತಹ ಅವಕಾಶವನ್ನು ಪರುಷರು ಬಳಸಿಕೊಳ್ಳುವುದರಿಂದ ದಲಿತ ಮಹಿಳೆಯರು ರಾಜಕೀಯದಲ್ಲಿ ಮುಂದೆ ಬರಲು ಸಾಧ್ಯವಾಗುತ್ತಿಲ್ಲ. ಅಲ್ಲದೆ ಚುನಾವಣೆಯಲ್ಲಿ ಸೋಲಿನ ಭೀತಿ

ಚುನಾವಣಾ ಪ್ರಚಾರದಲ್ಲಿ ಆಕೆಯಿಂದ ವ್ಯಕ್ತವಾಗುವ ಮುಗ್ಧತೆ, ರಾಜಕೀಯ ತಂತ್ರಗಾರಿಕೆಯ ಕೊರತೆ ಸಹಜವಾಗಿ ಮಹಿಳೆಯನ್ನು ರಾಜಕೀಯದಿಂದ ದೂರ ಇರಿಸಿದೆ.

**ವೋಟ್ ಬ್ಯಾಂಕ್:** ರಾಜಕೀಯದಲ್ಲಿ ಮಹಿಳೆಯರನ್ನು ಕೈಗೊಂಬೆಗಳಂತೆ ಕಾಣುತ್ತಿರುವುದು, ಕೇವಲ ವೋಟ್ ಬ್ಯಾಂಕ್‌ಗಳನ್ನಾಗಿ ದಲಿತ ಮಹಿಳೆಯರನ್ನು ಪರಿವರ್ತಿಸುತ್ತಿರುವುದು ಸಮಸ್ಯೆಯಾಗಿದೆ. ಏಕೆಂದರೆ ರಾಜಕೀಯ ಪಕ್ಷಗಳು ದಲಿತ ಮಹಿಳೆಯರಿಗೆ ವಿವಿಧ ರೀತಿಯ ಆಸೆ ಆಮಿಷಗಳನ್ನು ಒಡ್ಡುವುದು, ಪ್ರಮಾಣ ಮಾಡಿಡುವುದು, ತಾಂಬೂಲ ನೀಡುವುದು ಇತ್ಯಾದಿಗಳ ಸಂಪ್ರದಾಯಕ್ಕೆ ಒಗ್ಗಿಕೊಂಡಿರುವ ದಲಿತ ಮಹಿಳಾ ಸಮಾಜ ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ದಲಿತ ಮಹಿಳೆಯರನ್ನು ರಾಜಕೀಯ ಪಕ್ಷಗಳು ಸುಲಭವಾಗಿ ವೋಟ್ ಬ್ಯಾಂಕಾಗಿ ಪರಿವರ್ತಿಸಿವೆ.

**ಪಕ್ಷಪಾತ ನೀತಿ:** ರಾಜಕೀಯ ಪಕ್ಷಗಳು ದಲಿತ ಮಹಿಳೆಯರಲ್ಲಿ ಪಕ್ಷಪಾತ ನೀತಿಯನ್ನು ಅನುಸರಿಸುತ್ತಿರುವುದರಿಂದ ರಾಜಕೀಯವನ್ನು ಪ್ರವೇಶಿಸಲು ಸಮಸ್ಯೆಯಾಗಿ ಪರಿಣಮಿಸಿದೆ. ಮಹಿಳೆಯರ ಸಮಸ್ಯೆಗಳ ನಿವಾರಣೆಗೆ ಯಾವುದೇ ರಾಜಕೀಯ ಅಜೆಂಡಾ ಇಲ್ಲದಿರುವುದು, ರಾಜಕೀಯ ಪಕ್ಷಗಳಲ್ಲಿ ಮಹಿಳೆಯರಿಗೆ ರಾಜಕೀಯ ಸ್ಥಾನಮಾನ, ಅಧಿಕಾರ ಇಲ್ಲದಿರುವುದು ಹಾಗೂ ಪಕ್ಷದಲ್ಲಿ ಮಹಿಳೆಯರ ಬಗ್ಗೆ ಸಕಾರಾತ್ಮಕ ಧೋರಣೆ ಇಲ್ಲದಿರುವುದು ಕಾರಣವಾಗಿದೆ.

**ರಾಜಕೀಯ ಮೀಸಲಾತಿಯ ಅನ್ಯಾಯ:** ಮಹಿಳೆಯರಿಗೆ ರಾಜಕೀಯದಲ್ಲಿ ಮೀಸಲಾತಿ ನೀಡದೆ ಅನ್ಯಾಯ ಮಾಡುತ್ತಿರುವುದು, ಮಹಿಳಾ ಮೀಸಲಾತಿ ನೀತಿಯನ್ನು ಅಂಗೀಕರಿಸದಿರುವುದು, ಮಹಿಳೆಯರಲ್ಲಿ ರಾಜಕೀಯ ಇಚ್ಛಾಶಕ್ತಿ ಕೊರತೆ ಇರುವುದು ಅವರು ರಾಜಕೀಯದಲ್ಲಿ ಪ್ರವೇಶಿಸಲು ಸಾಧ್ಯವಾಗುತ್ತಿಲ್ಲ.

ಪ್ರಜಾಸತ್ತಾತ್ಮಕ ರಾಷ್ಟ್ರವಾದ ಭಾರತದಲ್ಲಿ ಶೇ. ೫೦ಕ್ಕೂ ಹೆಚ್ಚು ಸಂಖ್ಯೆಯಲ್ಲಿರುವ ಮಹಿಳೆಯರನ್ನು ರಾಜಕೀಯ ರಂಗದಿಂದ ದೂರ ಇರಿಸಲು ಸಾಧ್ಯವಿಲ್ಲ. ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಯಲ್ಲಿ ಮಹಿಳೆ ಮತದಾರಳಾಗಿ ವಹಿಸಿರುವ ಪಾತ್ರ ಮಹತ್ತರವಾದುದು. ಇಂದು ದಲಿತ ಮಹಿಳೆಯರು ರಾಜಕೀಯ ಅರಿವುಳ್ಳವರಾಗಿದ್ದಾರೆ. ಕರ್ನಾಟಕದಲ್ಲಿ ಸಹ ಕಂಡುಬಂದ ಚುನಾವಣೆಗಳಲ್ಲಿ ಸಾಕಷ್ಟು ಏರುಪೇರಿಗೆ ಕಾರಣರಾಗಿದ್ದಾರೆ. ಅಲ್ಲದೇ ಪಂಚಾಯಿತಿಯಲ್ಲಿ ಮಹಿಳಾ ಮೀಸಲಾತಿ ಜಾರಿಗೆ ಬಂದ ನಂತರ ಅನೇಕ ಮಹಿಳಾಪರ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಮತ್ತು ಅನುಷ್ಠಾನಕ್ಕೆ ತರುವಲ್ಲಿ ಯಶಸ್ವಿಯಾಗಿರುವುದನ್ನು ಕಾಣಬಹುದು.

ಒಟ್ಟಾರೆಯಾಗಿ ಹೇಳುವುದಾದರೆ ದಲಿತ ಮಹಿಳಾ ಸಬಲೀಕರಣಕ್ಕೆ ಅಡ್ಡಿಯಾಗುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವನ್ನು ಸಮಗ್ರವಾಗಿ ಚರ್ಚಿಸಲಾಗಿದೆ. ಇಂತಹ ಸಮಸ್ಯೆಗಳನ್ನು ಹೋಗಲಾಡಿಸಿ ದಲಿತ ಮಹಿಳೆಯರನ್ನು ಸಬಲರನ್ನಾಗಿ ಮಾಡಬೇಕಾದರೆ ಮೊದಲು ಸಮಾಜದಲ್ಲಿನ ಜನರ ಮನೋಭಾವದಲ್ಲಿ ಪರಿವರ್ತನೆಯಾಗಬೇಕು. ಸಮಾಜದಲ್ಲಿ ದಲಿತ ಮಹಿಳೆಯರ ಬಗ್ಗೆ ಇರುವ ತಪ್ಪುಕಲ್ಪನೆಯನ್ನು ಹೋಗಲಾಡಿಸಬೇಕು. ಇದನ್ನು ಕೇವಲ ಕಾನೂನಿನ ಬಲದಿಂದ ಮಾತ್ರ ಬದಲಾಯಿಸಿದರೆ ಸಾಲದು. ಬದಲಿಗೆ ಕಠಿಣ ಶಿಕ್ಷೆ ಕಾಯಿದೆಯನ್ನು ರೂಪಿಸಬೇಕು. ಮಹಿಳೆಯರಲ್ಲಿ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸಬೇಕು ದಲಿತ ಮಹಿಳಾ ದೋರಣೆ ವಿರುದ್ಧ ಧ್ವನಿ ಎತ್ತುವ ಮನೋಭಾವ ದಲಿತ ಮಹಿಳೆಯರಲ್ಲಿಯೇ ಬರಬೇಕು. ಭಾರತದಂತಹ ಸಂಕೀರ್ಣ ಸಮಾಜದಲ್ಲಿ ಜನಸಂಖ್ಯೆ ಪ್ರಮಾಣದಲ್ಲಿ ಹಾಗೂ ಕೌಟುಂಬಿಕ ಬದುಕಿನಲ್ಲಿ ಪುರುಷನಿಗೆ ಸಮಾನಳಾಗಿರುವ ದಲಿತ ಮಹಿಳೆಯರನ್ನು ಖಾಸಗಿ ಮತ್ತು ಸಾರ್ವಜನಿಕ ಬದುಕಿನಲ್ಲಿ ಎರಡನೇ ಸ್ತರಕ್ಕೆ ನಿಗದಿ ಮಾಡುವುದರ ಬದಲಿಗೆ ಮೊದಲ ದರ್ಜೆಯಲ್ಲಿ ಕಾಣುವ ಪ್ರಯತ್ನ ಜನ ಮತ್ತು

ಕಾನೂನುಗಳಿಂದ ಆಗಬೇಕಿದೆ. ಕುಟುಂಬದಲ್ಲಿ ದಲಿತ ಮಹಿಳೆಯರಿಗೆ ತೀರ್ಮಾನ ಕೈಗೊಳ್ಳುವ ಮತ್ತು ಹಣಕಾಸಿನ ವ್ಯವಹಾರಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಬೇಕು. ಪಂಚಾಯಿತಿಗಳಲ್ಲಿ ದಲಿತ ಮಹಿಳೆಯರಿಗೆ ನೀಡುವ ಮೀಸಲಾತಿಯನ್ನು ರಾಜಕೀಯ ಕ್ಷೇತ್ರಕ್ಕೂ ವಿಸ್ತರಿಸಬೇಕು. ಇದಕ್ಕಾಗಿ ರಾಜಕೀಯ ಇಚ್ಛಾಶಕ್ತಿ ರೂಪುಗೊಳ್ಳಬೇಕಿದೆ. ತಳಹಂತಂದಲೇ ಸಮಿತಿಯನ್ನು ರಚಿಸಿಕೊಂಡು ಉನ್ನತ ಯೋಜನೆಗಳನ್ನು ರೂಪಿಸಿಕೊಂಡು ರಾಜ್ಯ ಮತ್ತು ರಾಷ್ಟ್ರದಲ್ಲಿ ಬಲಿಷ್ಠ ಹೋರಾಟಕ್ಕೆ ದುಮುಕಬೇಕು. ಆಗ ಮಾತ್ರ ದಲಿತ ಮಹಿಳೆಯರ ರಾಜಕೀಯ ಸಬಲೀಕರಣದ ಸಮಸ್ಯೆಗಳನ್ನು ನಿವಾರಿಸಿ ಅವರ ಸಶಕ್ತರನ್ನಾಗಿಸಲು ಸಂಪೂರ್ಣ ಸಾಧ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಅಕಿನ್ ಚನ್‌ಎಸ್. *ಕ್ಯಾಸ್ಟ್, ಕ್ಲಾಸ್ ಆಂಡ್ ಪಾಲಿಟಿಕ್ಸ್.* ಗ್ಯಾನ್ ಪಬ್ಲಿಕೇಷನ್.
- ಬಷಿರುದ್ದೀನ್ ಅಹ್ಮದ್. (1971, ಜನವರಿ). ಓಟಿಂಗ್ ಇನ್ ಇಂಡಿಯಾ–ಪಾಲಿಟಿಕ್ಸ್ ಸ್ಟ್ರಾಟಿಫಿಕೇಷನ್ ಆಫ್ ಇಂಡಿಯಾ. *ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ.* ವಾರ್ಷಿಕ ಸಂಚಿಕೆ
- ಚಂದ್ರಶೇಖರ್ ಟಿ.ಆರ್. *ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು.* ಸಿ.ವಿ.ಜಿ. ಪಬ್ಲಿಕೇಷನ್.
- ಲೆಸ್ಟರ್ ಸಬ್ಲೂ ಮಿಲ್ ಬ್ರಾತ್. (1977). *ಪೊಲಿಟಿಕಲ್ ಪಾರ್ಟಿಸಿಪೇಷನ್– ಹೌ ಆಂಡ್ ವೈ ಡು ಪೀಪಲ್ ಗೆಟ್ ಇನ್‌ವಾಲ್ವಡ್ ಇನ್ ಪಾಲಿಟಿಕ್ಸ್,* ರ್‍ಯಾಂಡ್ ಮ್ಯಾಕ್ ಪಬ್ಲಿಷಿಂಗ್.
- ಮೂರ್ತೀಶ್ವರಯ್ಯ ಬೆ.ಕಾ. (2000). ಮಹಿಳೆ–ಸಮಾಜ ಮತ್ತು ಕಾನೂನು. ಸಪ್ನ ಬುಕ್ ಹೌಸ್.
- ಮಹೇಶ್ ಸಿ.ಕೆ. *ಅಂಬೇಡ್ಕರ್* ಮತ್ತು *ಮೀಸಲಾತಿ ವರ್ಗೀಕರಣ.* ಮಾತಂಗ ಪ್ರಕಾಶನ.
- ನಾರಾಯಣನ್ ಕೆ.ಆರ್. (2003, ಮೇ). ಮಾನವ ಹಕ್ಕುಗಳು ಮತ್ತು ಮಹಿಳಾ ಸಶಕ್ತತೆ. *ಸಂವಾದ.* ಪುಟ–32
- ನರಸಿಂಹ ಮೂರ್ತಿ, ಎಸ್.ಎನ್. (2010). ಪಂಚಾಯತ್ ರಾಜ್ ಮತ್ತು ಮಹಿಳಾ ಸಶಕ್ತೀಕರಣ. ಅಂಕನಹಳ್ಳಿ ಪ್ರಕಾಶನ.
- ಪೂನಮ್ ವತ್ಸ. (2004). *ಪೊಲಿಟಿಕಲ್ ಪಾರ್ಟಿಸಿಪೇಶನ್ ಆಂಡ್ ಕಾನ್ಸ್ಟಿಟ್ಯೂಷನಲ್ ಟ್ರಾನ್ಸ್ಫರ್ಮೇಶನ್ ಆಫ್ ರೂರಲ್ ವುಮೆನ್.* ಅಭಿಜಿತ್ ಪಬ್ಲಿಕೇಶನ್.